**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ</u>**

**<u>ಸಿಸಿ ಸಂಖ್ಯೆ: 2700/15</u>** **CW**-05 **PW**-04

**<u>ಸಾಕ್ಷಿಯನ್ನು ದಿಃ 15.02.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

| | |
|---|---|
| ಹೆಸರುಃ | ದೀಪು |
| ತಂದೆಯ ಹೆಸರುಃ | ಜಯರಾಮೇಗೌಡ |
| ವಯಸ್ಸುಃ | 35 ವರ್ಷ |
| ವೃತ್ತಿಃ | ವ್ಯವಸಾಯ |
| ವಾಸ ಸ್ಥಳಃ | ಚನ್ನರಾಯಪಟ್ಟಣ |

**<u>ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>**

ಈಗ ಸಾಕ್ಷಿಗೆ ನಿಪಿ 4 ಮಹಜರನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು , ಸದರಿ ಸಹಿಯನ್ನು ನಿಪಿ 4(ಡಿ) ಎಂದು ಗುರುತಿಸಲಾಯಿತು . ಸದರಿ ಸಹಿಯನ್ನು ನಾನು 8 ವರ್ಷಗಳ ಹಿಂದೆ ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ . ಯಾವ ವಿಚಾರಕ್ಕೆ ಎಂದು ನನಗೆ ಗೊತ್ತಿಲ್ಲ . ಪೋಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ . ನನ್ನ ಜೊತೆ ನಿಪಿ 4 ಕ್ಕೆ ಯಾರು ಸಹಿ ಮಾಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ . ಪೋಲೀಸರ ಮುಂದೆ ನಾನು ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ .

**(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>**

ದಿನಾಂಕ 31.07.2014 ರಂದು ಚನ್ನರಾಯಪಟ್ಟಣ ಟೌನ್ ರಾಘವೇಂದ್ರ ಸ್ವಾಮಿ ಮುಂಭಾಗದಲ್ಲಿರುವ ವಿಶ್ವನಾಥ್ ರವರ ಅಂಗಡಿ ಮಳಿಗೆಯಲ್ಲಿ ನವೀನ್ ಎಂಟರ್ ಪ್ರೈಸಸ್ ನಲ್ಲಿ ಆರೋಪಿಗಳು ಯಾವುದೇ ಪರವಾನಗಿ ಇಲ್ಲದೇ ಬಡ್ಡಿ ವ್ಯವಹಾರ ಮಾಡುತ್ತಿದ್ದು, ಪೋಲೀಸರು ನಮ್ಮ ಸಮಕ್ಷಮ ದಾಳಿ ನಡೆಸಿ ಆರೋಪಿಗಳಿಂದ ಪ್ರೋನೋಟ್ಸ್ , ಸ್ಟಂಪ್ ಪೇಪರ್ಸ್ ಮತ್ತು ಚೆಕ್ ಪುಸ್ತಕಗಳನ್ನು ನಿಪಿ 4 ರಂತೆ ಮಹಜರ್ ಮಾಡಿ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ . ಸದರಿ ಮಹಜರ್ ಗೆ ನಾನು ಚಾಸಾ 6 ಸ್ಥಳದಲ್ಲಿ ಸಹಿ ಮಾಡಿರುತೇವೆ ಎಂದರೆ ಸರಿಯಲ್ಲ . ಸದರಿ ಮಹಜರ್ ನ್ನು ಬೆಳಗ್ಗೆ 9.30 ರಿಂದ 11.15 ರವರೆಗೆ ಬರೆಯಲಾಗಿದೆ ಎಂದರೆ ಸರಿಯಲ್ಲ . ಆ ಸಂಬಂಧ ಮೇಲೆ ಹೇಳಿದಂತೆ ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ . ಸಾಕ್ಷಿ ಅಲ್ಲಗಳದ ಹೇಳಿಕೆ ಭಾಗವನು ನಿಪಿ 6 ಎಂದು ಗುರುತಿಸಲಾಯಿತು . ನನಗೆ ಸದರಿ ವಿಚಾರಗಳು ಗೊತ್ತಿದ್ದರು ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇಲ್ಲ.**

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ದೀಪು.ಬಿ.ಸಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**